**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ದಕ್ಷಿಣ ಕನ್ನಡ, ಮಂಗಳೂರು.**

**ಸೆಷನ್ಸ್ ಕೇಸ್ ನಂಬ್ರ 44 / 2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಚಿರಾಗ್ | ಪ್ರಾಸಾಃ 4 |
| ತಂದೆಯ ಹೆಸರು | : | ಬೋಜ ದೇವಾಡಿಗ | ಚಾಸಾಃ 4 |
| ಪ್ರಾಯ | : | 23 ವರ್ಷ | **ದಿನಾಂಕಃ 03-02-2026** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ರಿಕ್ಷಾ ಚಾಲಕ ಮಾಲಕ | |
| ವಾಸಸ್ಥಳ | : | ಕುಜುಮ ಗದ್ದೆ, ಕೊಲ್ಯ, ತಲಪಾಡಿ ಗ್ರಾಮ, ಉಳ್ಳಾಲ ತಾಲೂಕು | |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು ಕಳೆದ 5 ವರ್ಷಗಳಿಂದ ರಿಕ್ಷಾ ಚಾಲನೆ ಮಾಡುತ್ತಿದ್ದು, ಅದರ ನೋಂದಣಿ ಸಂಖ್ಯೆ ಕೆಎ-19- ಎಡಿ-7032 ಆಗಿರುತ್ತದೆ, ಅದು ನನ್ನ ಸ್ವಂತ ವಾಹನವಾಗಿರುತ್ತದೆ. ದಿನಾಂಕ 13.12.2023 ರಂದು ನಾನು ರಾತ್ರಿ ಸೋಮೇಶ್ವರದಲ್ಲಿರುವ ಶನೀಶ್ವರ ಕಟ್ಟೆಯಲ್ಲಿ ಪೂಜೆ ಇದ್ದ ಬಗ್ಗೆ ಕೆಲಸಕ್ಕಾಗಿ ಅಲ್ಲಿಗೆ ಹೋಗಿದ್ದು, ಕೆಲಸ ಮುಗಿಸಿ ಅಲ್ಲಿಂದ ರಾತ್ರಿ 11.30 ಗಂಟೆಗೆ ನನ್ನರಿಕ್ಷಾದಲ್ಲಿ ಮನೆಗೆ ಹೋಗುತ್ತಿದ್ದು, ನಾನು ಕೊಲ್ಯದಲ್ಲಿರುವ ಜ್ಯೋಲ್ಯಾಂಡ್ ಶಾಲೆಯ ಗೇಟಿನ ಸ್ವಲ್ಪ ಮುಂದೆ ತಲುಪಿದಾಗ, ಅಲ್ಲಿ ಸ್ವಲ್ಪ ಜನರು ನಿಂತಿದ್ದು ಅವರು ನನ್ನ ರಿಕ್ಷಾವನ್ನುನಿಲ್ಲಿಸಿರುತ್ತಾರೆ. ನಾನು ರಿಕ್ಷಾವನ್ನು ನಿಲ್ಲಿಸಿ ನೋಡಿದಾಗ ಒಬ್ಬ ವ್ಯಕ್ತಿ ಕೆಳಗೆ ಬಿದ್ದಿದ್ದು ಆತನ ಎದೆಯಿಂದ ಮತ್ತು ಅಲ್ಲೆಯಿಂದ ರಕ್ತ ಬರುತ್ತಿತ್ತು ಮತ್ತು ಆತನ ಮೈಮೇಲೆ ಪ್ಯಾಂಟ್ ಮಾತ್ರ ಇತ್ತು. ಆತನನ್ನು ಇಬ್ಬರು ಸೇರಿ ನನ್ನ

ರಿಕ್ಷಾದಲ್ಲಿ ಹಾಕಿ ದೇರಳಕಟ್ಟೆಯಲ್ಲಿರುವ ಕೆ.ಎಸ್.ಹೆಗ್ಡೆ ಆಸ್ಪತ್ರೆಗೆ ಹೋಗುವಂತೆ ತಿಳಿಸಿ ಅವರಿಬ್ಬರು ಸಹ ಬಂದಿರುತ್ತಾರೆ.

2. ಗಾಯಾಳುವಿನ ಜೊತೆ ಇಬ್ಬರು ಇದ್ದು,ಅವರ ಬಳಿ ಘಟನೆಯ ಬಗ್ಗೆ ಕೇಳಿದಾಗ, ಸೂರಜ್ ಎನ್ನುವವರು ಗಾಯಾಳುವಿಗೆ ಚೂರಿ ಹಾಕಿರುವುದಾಗಿ ತಿಳಿಸಿರುತ್ತಾರೆ. ಗಾಯಳುವನ್ನು ದೇರಳಕಟ್ಟೆಯಲ್ಲಿರುವ ಕೆ.ಎಸ್.ಹೆಗ್ಡೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಆಸ್ಪತ್ರೆಗೆ ತಲುಪಿದಾಗ ಅಲ್ಲಿಗೆ ಇಬ್ಬರು ಬೈಕಿನಲ್ಲಿ ಬಂದಿದ್ದು, ಅವರ ಪೈಕಿ ಒಬ್ಬರು ಗಾಯಾಳುವಿನ ತಮ್ಮ ಎಂದು ತಿಳಿದು ಬಂತು. ಅವರು ಗಾಯಾಳುವನ್ನು ಆಸ್ಪತ್ರೆಗೆ ದಾಖಲಿಸಿರುತ್ತಾರೆ. ನಾನು ಆಸ್ಪತ್ರೆಯಲ್ಲಿ ಇದ್ದಾಗ, ಗಾಯಾಳುವಿನ ತಮ್ಮ ಶರಣ್ ಎಂಬುವವರು ಬಂದಾಗ ನಾನು ಘಟನೆಯ ಬಗ್ಗೆ ವಿಚಾರಿಸಿದಾಗ, ಜ್ಯೋಲ್ಯಾಂಡ್ ಶಾಲೆಯ ಬಳಿ ಸೂರಜ್ ಮತ್ತು ರವಿರಾಜ್ ಎನ್ನುವವರು ಸ್ಕೂಟರಿನಲ್ಲಿ ಕುಳಿತಿದ್ದಾಗ, ವರುಣ್ ಗಟ್ಟಿ ಮತ್ತು ಅಕ್ಷಯ್ ಎನ್ನುವವರಲ್ಲಿ ಉಡಾಫೆಯಿಂದ ಮಾತನಾಡಿ, ಇಲ್ಲಿಯೇ ಕೊಂದುಹಾಕುತ್ತೇನೆ ಎಂದು ಹೇಳಿ, ಸೂರಜ್ ಎನ್ನುವವರು ಚೂರಿಯಿಂದ ವರುಣ್ ರವರಿಗೆ ಇರಿದಿರುವುದಾಗಿ ತಿಳಿಸಿರುತ್ತಾರೆ. ನಂತರ ರಾತ್ರಿ 2.30 ಗಂಟೆಗೆ ವರುಣ್ ಗಟ್ಟಿ ಮೃತಪಟ್ಟಿರುವುದಾಗಿ ಶರಣ್ ರವರು ತಿಳಿಸಿರುತ್ತಾರೆ. ನಂತರ ನಾನು ರಿಕ್ಷಾದಲ್ಲಿ ಮನೆಗೆ ಹೋಗಿರುತ್ತೇನೆ. ನನ್ನ ರಿಕ್ಷಾದ ಸೀಟ್ ಮತ್ತು ಮ್ಯಾಟ್ ನಲ್ಲಿ ರಕ್ತದ ಕಲೆಗಳು ಇತ್ತು, ಅದನ್ನು ನಾನು ಬೆಳಗ್ಗೆ ಶ್ಯಾಂಪ್ ಹಾಕಿ ತೊಳೆದಿರುತ್ತೇನೆ. ಈ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲು: 1ನೇ ಆರೋಪಿ ಪರ ಶ್ರೀ.ಬಿ.ಎ.ಬಿ ವಕೀಲರಿಂದ</u>**

3. ಚಾಸಾ-1 ಶರಣ್ ಎನ್ನುವವರು ನನಗೆ ಶಾರದ ಕಟ್ಟೆಯಲ್ಲಿ ನೋಡಿ ಪರಿಚಯ ಇರುತ್ತಾರೆ. ಚಾಸಾ-3 ಮೌನೇಶ್ ರವರು ಸಹ ಪರಿಚಯ, ಅವರು ಘಟನೆ ನಡೆದ ದಿನದಂದು ಗಾಯಾಳುವನ್ನು ನನ್ನ ಆಟೋದಲ್ಲಿ ತರುವಾಗ ಇದ್ದರು. ನಾನು ರಿಕ್ಷಾದಲ್ಲಿ ಒಬ್ಬನನ್ನು ಕರೆದುಕೊಂಡು ಹೋದ ಸಮಯದಲ್ಲಿ ನಾನು ಪೋಲಿಸರಿಗೆ ಯಾವುದೇ ಮಾಹಿತಿಯನ್ನು ಕೊಟ್ಟಿರುವುದಿಲ್ಲ, ನನ್ನ ಜೊತೆಯಲ್ಲಿ ಬಂದವರು ಕೊಟ್ಟಿರುವ ಬಗ್ಗೆ ನನಗೆ ತಿಳಿದಿಲ್ಲ.

4. ನಾನು ಆಸ್ಪತ್ರೆಯಲ್ಲಿ ರಾತ್ರಿ 2.30 ರವರ ತನಕ ಇದ್ದೆ. ನಾನು ಇದ್ದ ಸಮಯ ಪೋಲಿಸರು ಬಂದಿರುವ ಬಗ್ಗೆ ನಾನು ಗಮನಿಸಿರುವುದಿಲ್ಲ, ನಾನು ನನ್ನ ಆಟೋದಲ್ಲಿ ಕುಳಿತಿದ್ದೆ. ಪೋಲಿಸರು ನನ್ನನ್ನು ಮರುದಿನ ಕರೆ ಮಾಡಿ ಬರಲು ಹೇಳಿದ್ದು, ನನ್ನ ವಿಚಾರಣೆ ಮಾಡಿರುತ್ತಾರೆ. ನಾನು ಶನೀಶ್ವರ ಕಟ್ಟೆಯಲ್ಲಿ ಕೆಲಸ ಮಾಡುತ್ತಿದ್ದಾಗ ಅಲ್ಲಿ 10-15 ಜನರು ಇದ್ದರು. ನಾನು ಅಲ್ಲಿಂದ ಹೊರಟ ಸಮಯ ಬೇರೆಯವರು ಪೈಂಟಿನ ಕೆಲಸ ಮಾಡುತ್ತಿದ್ದರು. ನಾನು ಶನೀಶ್ವರ ಕಟ್ಟೆಯಿಂದ ಹೊರಟಾಗ ರಾತ್ರಿ 11.20 ಆಗಿದ್ದು, ಜ್ಯೋಲ್ಯಾಂಡ್ ಶಾಲೆಯ ಬಳಿ ತಲುಪಿದಾಗ ರಾತ್ರಿ 11.30 ಆಗಿತ್ತು. ಸದರಿ ಶಾಲೆಯ ಬಳಿ ನಾನು ತಲುಪಿದಾಗ 7-8 ಜನರು ಇದ್ದರು. ನಾನು ಸದರಿ ಶಾಲೆಯ ಬಳಿ 2 ನಿಮಿಷಗಳ ಕಾಲ ಇದ್ದು, ಅಲ್ಲಿಂದ ಗಾಯಾಳುವನ್ನು ನನ್ನ ಆಟೋದಲ್ಲಿ ಕರೆದುಕೊಂಡು ಹೋಗಿರುತ್ತೇನೆ. ಸದರಿ ಶಾಲೆಯ ಬಳಿ ಇದ್ದ 8 ಜನರು ಯಾರು ಎಂದು ಹೇಳಲು ಆಗುತ್ತದಾ ಎಂದರೆ ನನಗೆ ಅವರುಗಳ ಪರಿಚಯ ಇರುವುದಿಲ್ಲ. ನಾನು ಪ್ರಥಮವಾಗಿ ನೋಡಿದಾಗ

ಗಾಯಾಳು ಒಂದು ಬದಿ ಒರಗಿ ಬಿದ್ದಿದ್ದರು. ಅವರು ಯಾವಾಗದಿಂದ ಬಿದ್ದಿದ್ದರು ಎಂದು ಮತ್ತು ಅಲ್ಲಿ ಎನು ನಡೆದಿದೆ ಎಂದು ವೈಯಕ್ತಿಕವಾಗಿ ಗೊತ್ತಾ ಎಂದರೆ ನನಗೆ ಚಾಸಾ-1 ರವರು ಹೇಳಿದ ಮೇರೆಗೆ ತಿಳಿದಿರುತ್ತದೆ. ಚಾಸಾ-1 ರವರು ನನ್ನ ಜೊತೆ ಆ ಸಮಯ ಬಂದಿರುವುದಿಲ್ಲ, ಬೈಕಿನಲ್ಲಿ ಬಂದಿರುತ್ತಾರೆ.

5. ಪೋಲಿಸರು ನನ್ನ ರಿಕ್ಷಾವನ್ನು ವಶಪಡಿಸಿಕೊಂಡಿರುವುದಿಲ್ಲ. ಚಾಸಾ-1 ಮತ್ತು 3 ರವರು ನನಗೆ ಆತ್ಮೀಯರಾದ ಕಾರಣ ಮತ್ತು ನಾವೆಲ್ಲಾ ಒಟ್ಟಿಗೆ ಸೇರುವ ಕಾರಣ, ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಚಾಸಾ-2 ರವರ ಪರಿಚಯ ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ನನಗೆ ಚಾಸಾ-1 ರವರು ಸದರಿ ಘಟನೆಯ ಬಗ್ಗೆ ಹೇಳಿರುತ್ತಾರೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

**2ನೇ ಆರೋಪಿತರ ಪರ ವಕೀಲರು, 1ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅನುಮೋದಿಸಲು ಕೋರಿದ್ದು, ಅನುಮತಿ ನೀಡಲಾಯಿತು.**

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓದಿ ಹೇಳಿ ಕೇಳಿ ಸರಿ ಇದೆ.**

**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ದ.ಕ., ಮಂಗಳೂರು.**